*ನಿಮಗೆ ಬೇಕಿಲ್ಲದಿದ್ರೂ ರಾಜಕೀಯ ಕಾರಣಗಳಿಂದ ನಿಮ್ಮ ಬೆಂಬಲಿಗರಾದ್ರೂ ಅಂತಹ ಅವಕಾಶಗಳನ್ನ ಬಳಸಿಕೊಂಡಿರಬಹುದಾ?*

ನಾನು ಯಾರೊಂದಿಗೂ ಅಂತಹ ಸಂಪರ್ಕ ಇಟ್ಟುಕೊಂಡಂತವನಲ್ಲ.

*ಜನ ಹೇಳ್ತಾರಲ್ಲ, ನಿಮ್ಮ ಮಗನ ವ್ಯವಹಾರಗಳ ಬಗ್ಗೆ ನಿಮಗೆ ಗೊತ್ತಿಲ್ಲಾಂತ.*
ನನ್ನ ಮಗ, ಆತನ ಬ್ಯಾಂಕ್ ಸಂಬಂಧಿ ಚಟುವಟಿಕೆಗಳೊಂದಿಗೆ, ಕ್ರಶರ್‌ಗಳನ್ನ ಹಾಕ್ಕೊಂಡಿದ್ದಾನೆ.

*ಅದಕ್ಕೆ ನಿಮ್ಮ ಸಮ್ಮತಿ ಇತ್ತಾ.*
ಕ್ರಶರ್ ಹಾಕ್ತೀನೀಂತ ಹೇಳ್ದ.

*ಅದಕ್ಕೆ ಹಣ?*
ಸಾಲ ತೊಗೊಂಡ. ತನ್ನಲ್ಲಿದ್ದ ಹಣವನ್ನೂ ಹಾಕ್ದ. ನಾವು ಒಳ್ಳೆ ಮನೆತನದಿಂದ ಬಂದಿದ್ದೇವೆ. ಏನೂ ಇಲ್ಲದೆ ಬಂದವರೇನೂ ಅಲ್ಲ. 1940ನೇ ಇಸವಿಯಲ್ಲೇ ನಮ್ಮ ತಂದೆಯವರು ಕಾರ್ಖಾನೆ ಇಟ್ಕೊಂಡಿದ್ರು, ಬಹಳ ವ್ಯವಹಾರಗಳಿದ್ವು. 1947ರಲ್ಲೇ ನಮ್ಮಲ್ಲಿ ವಾಹನ ಇತ್ತು. ನನ್ನ ತಂದೆ ಮತ್ತು ಅವರ ಸಹೋದರರು ಪ್ರಭಾವಿಗಳಾಗಿದ್ರು.

*ಆದ್ರೂ ನಿಮ್ಮ ಮಗನ ವ್ಯವಹಾರಗಳ ಬಗ್ಗೆ ಕೆಲವರು ಹುಬ್ಬೇರಿಸ್ತಿದ್ರೆ, ಅದಕ್ಕೆ ಕಾರಣ ಇರಬಹುದಾ? ನಿಮಗೇ ಗೊತ್ತಿಲ್ಲದಂತಹ ಕಾರಣಗಳು?*

ನನಗೆ ನನ್ನ ಮಗನ ಬಗ್ಗೆ ಸಂಪೂರ್ಣವಾದಂತಹ ವಿಶ್ವಾಸ ಇದೆ. ಆತ ಯಾವುದೇ ಅಕ್ರಮ ಗಣಿಗಾರಿಕೆಯಲ್ಲೂ ಭಾಗಿಯಾಗಿಲ್ಲ.

*ಗಣಿಗಾರಿಕೆ ಅಲ್ಲದೆ ಬೇರೆ ವ್ಯವಹಾರಗಳಲ್ಲಿ?*

ಅದೇ ಕ್ರಶರ್.

ಅದರಲ್ಲಿ ಏನಾದ್ರೂ ಅಕ್ರಮ?
ಅದರಲ್ಲಿ ಅಕ್ರಮದ ಪ್ರಶ್ನೆನೇ ಇಲ್ಲ. ಅದನ್ನ್ ಸಾಲ ತೆಗೊಂಡು ಮಾಡಿ ಈ ಜಿಂದಾಲ್ ಅವರಿಗೆ ಬಾಡಿಗೆಗೆ ಕೊಟ್ಟಿದ್ದಾನೆ.

ರಾಜಕಾರಣಿಗಳು ಕೆಲವೊಮ್ಮೆ ಮಾಡುವ ದಲ್ಲಾಳಿ ಕೆಲಸಗಳಲ್ಲಿ, ಮಧ್ಯಸ್ಥಿಕೆ, ಕೆಲಸಗಳಲ್ಲಿ ಭಾಗಿಯಾಗಿರಬಹುದಾ?
ಎಲ್ಲಾ ನಿಮಗೆ ಗೊತ್ತಿರ ಬೇಕೂಂತೇನೂ ಇಲ್ವಲ್ಲಾ.

ಒಪ್ಕೋತೀನಿ. ಎಲ್ಲಾ ಗೊತ್ತಿರಬೇಕೂಂತ ಏನೂ ಇಲ್ಲ. ಪುರಾಣ ಕಾಲದಿಂದಲೂ ಹಣ ಮತ್ತು ಹೆಣ್ಣಿನ ವಿಷಯದಲ್ಲಿ ಆಪಾದನೆ ಮಾಡ್ದಾಗ ತಕ್ಷಣ ಜನ ನಂಬ್ತಾರೆ. ಬೆಂಕಿಯಿಲ್ಲದೆ ಹೊಗೆಯಾಡುತ್ತಾ. ಏನಾದ್ರೂ ಇರಬಹುದು ಅಂತ ಜನ ಅಂದ್ಕೋತಾರೆ. ಸಾಕ್ಷಾಧಾರಗಳನ್ನ ಒದಗಿಸ್ಲಿಕ್ಕೆ ಒತ್ತಾಯ ಮಾಡುತ್ತಿರುವಂತಹ ಕಾರಣ ಕೂಡ ಇದೇ.

ಏನಾದ್ರೂ ಸಾಕ್ಷ್ಯಾಧಾರಗಳನ್ನ ಒದಗಿಸಿದ್ರೆ?
ಒದಗಿಸ್ಲಿ. ಆಗ ನಾನು ಏನು ನಿಲುವು ತೆಗೊಳ್ಬೇಕು, ಏನು ಉತ್ತರ ಕೊಡಬೇಕು, ಆಗ ಹೇಳ್ತೀನಿ.

ನಿಮ್ಮ ಮಗನೊಂದಿಗೆ ಇದರ ಬಗ್ಗೆ ಮಾತಾಡಿದ್ದೀರ?
ಮಾತಾಡಿದ್ದೀನಿ. ಆತನನ್ನ ಕೇಳಿದ್ದೇನೆ. ಯಾವುದೇ ತರಹದ ಅವ್ಯವಹಾರಗಳನ್ನ ಮಾಡಿಲ್ಲ ಅನ್ನತಕ್ಕಂತಹ ಮಾತನ್ನ ಆತ ಹೇಳ್ತಾನೆ.

*ವಿಷಯ ಬೇರೆಯಾಗಿದ್ರೆ, ಪರಿಣಾಮಗಳ ಬಗ್ಗೆ ಹೇಳಿದ್ದಿರಾ?*

ಆತ ಪ್ರಾಜ್ಞನಿದ್ದಾನೆ. ಆತನಿಗೆ ಅಷ್ಟು ಗೊತ್ತಿದೆ. ನನ್ನ ಮನೆತನದಲ್ಲಿರುವ ನನ್ನ ಸಣ್ಣ ಮೊಮ್ಮಗನಿಗೂ ಅಷ್ಟು ವಿವೇಚನೆಯಿದೆ. ನನ್ನ ಮಗನಿಗೂ ಸುಮಾರು 37 ವರ್ಷ. ಜವಾಬ್ದಾರಿ ಸ್ಥಾನದಲ್ಲಿದ್ದಾನೆ.

*ನಿಮ್ಮ ಸರ್ಕಾರ ನಿಮನ್ನ ಬಳ್ಳಾರಿ ಉಸ್ತುವಾರಿ ಮಂತ್ರಿಯನ್ನಾಗಿಸುವ ಪ್ರಯತ್ನ ಮಾಡಿದ್ದೇ ಇದಕ್ಕೆಲ್ಲಾ ಕಾರಣವಾಯ್ತಾ?*

ಇತ್ತೀಚೆಗೆ ಮುಖ್ಯಮಂತ್ರಿಗಳೇ ಹೇಳಿದ್ದಾರೆ ಜನಾರ್ಧನ ರೆಡ್ಡಿಯವರು ಅವರಿಗೆ ನನ್ನನ್ನ ಮಂತ್ರಿ ಕೂಡ ಮಾಡಬರದು ಅಂತ ಕೇಳಿಕೊಂಡ್ರು ಅಂತ. ಉಸ್ತುವಾರಿ ಮಂತ್ರಿ ಮಾಡ್ಬಾರ್ದು ಅಂತಾನೂ ಹೇಳಿದ್ರು ಅಂತ.

*ಯಾತಕ್ಕಾಗಿ?*
ನಾನು ಪ್ರಭಾವಿ ನಾಯಕ.

*ಮಂತ್ರಿಯಾದಾಕ್ಷಣ ನೀವು ರೆಡ್ಡಿಯವರ ರಾಜಕೀಯದ ದಿಕ್ಕನ್ನ ಬದಲಾಯಿಸ್ತೀರ ಅಂತ್ಲ?*

ಭಯಕ್ಕೆ ಔಷಧಿ ಇಲ್ಲ. ಹಗ್ಗ ನೋಡಿ ಹಾವೂಂತ ಯಾಕೆ ಹೇಳ್ತಾರೆ?